# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 160/2023

**ಸಾಕ್ಷಿಯನ್ನು ದಿಃ 24.03.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಸುರೇಶ್ | ಸಿ.ಡಬ್ಲ್ಯೂಃ **6** | ಪಿ.ಡಬ್ಲ್ಯೂಃ **5** |
| ತಂದೆಯ ಹೆಸರು | ಕುಳ್ಳೇಗೌಡ | | |
| ವಯಸ್ಸು | **56**ವರ್ಷ | | |
| ಕೆಲಸ | ಏನೂ ಇಲ್ಲ | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ನಾನು ಸುಮಾರು 30 ವರ್ಷಗಳಿಂದ ರೇಣುಕಾ ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡಿದ್ದೆ. ಈಗ್ಗೆ 6 ತಿಂಗಳಿಂದ ನನಗೆ ಆನಾರೋಗ್ಯದಿಂದ ಸದರಿ ಬಾರ್ ಅಂಡ್ ರೆಸ್ಟೋರೆಂಟ್ ಕೆಲಸಕ್ಕೆ ನಾನು ಹೋಗುತ್ತಿಲ್ಲ, ನಾನು ಮನೆಯಲ್ಲಿಯೇ ಇದ್ದೇನೆ. ನನಗೆ ಈ ಪ್ರಕರಣದ ವಿಚಾರ ಏನೂ ಗೊತ್ತಿಲ್ಲ. ನನ್ನನ್ನು ಪೋಲೀಸರು ಯಾವತ್ತೂ ಕರೆಯಿಸಿ ಹೇಳಿಕೆ ಪಡೆದುಕೊಂಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

2. ದಿಃ 17.09.2022ರಂದು ರಾತ್ರಿ 11.00ಗಂಟೆ ಸಮಯದಲ್ಲಿ ನಾನು ಹಾಗೂ ಗಣೇಶ್ ಅವರು ಬೀಗ ಹಾಕಿಕೊಂಡು ಹೋಗಿದ್ದು, ದಿಃ 18.09.2022ರಂದು ಬೆಳಿಗ್ಗೆ 7.00ಗಂಟೆ ಸಮಯದಲ್ಲಿ ಬಾರ್ ಅನ್ನು ಕ್ಲೀನ್ ಮಾಡಲು ನಾನು ಹಾಗೂ ಗಣೇಶ್ ಬಂದು ನೋಡಿದಾಗ ಯಾರೋ ಕಳ್ಳತನ ಮಾಡಲು ಬಾರಿನ ಬೀಗ ಹೊಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಬಾರ್ ನ ಮಾಲೀಕರಿಗೆ ಫೋನ್ ಮುಖಾಂತರ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಚಾಸಾ-1ರವರು ಸದರಿ

ವಿಚಾರವಾಗಿ ದೂರು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಮೇಲ್ಕಂಡಂತೆ ನಾನು ಹೇಳಿಕೆ ಕೊಟ್ಟಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.4 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರು ಇಲ್ಲವೆಂದಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.